ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷಣೆಯವರೇ ಯಾವುದೇ ಸ್ನಾತಕೋತ್ತರ ವಿಶ್ವವಿದ್ಯಾನಿಲಯದ ಕೇಂದ್ರವನ್ನು ತೆರೆಯಬೇಕಾದರೆ ಅದಕ್ಕೆ ಶೈಕ್ಷಣಿಕ ಹಿನ್ನೆಲೆ ಇರುತ್ತದೆ. ಆ ಶೈಕ್ಷಣಿಕ ಶಾಸ್ತ್ರೀಯ ಅಧ್ಯಾಯನದ ಆಧಾರದ ಮೇಲೆ ನಾವು ಈ ಕೇಂದ್ರವನ್ನು ತೆರೆಯಬೇಕಾಗುತ್ತದೆ. ಈ ವಿಚಾರಗಳನ್ನೊಳಗೊಂಡಂತೆ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಅಂದಿನ ಕುಲಪತಿಗಳು ದಿನಾಂಕ 7.3.1986 ರಲ್ಲಿ ಒಂದು ಅಧಿಸೂಚನೆಯಲ್ಲಿ ಶ್ರೀ ಕೆ. ಆರ್. ರಾಮಚಂದ್ರ ಎಂಬುವರ ನೇತೃತ್ವದಲ್ಲಿ ಒಂದು ಏಕಸದಸ್ಯ ಆಯೋಗವನ್ನು ನೇಮಕಮಾಡಿದ್ದರು. ಆ ಆಯೋಗದವರು ದಿನಾಂಕ 2.7.1986 ರಲ್ಲಿ ತನ್ನ ವರದಿಯನ್ನು ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ, ಅವರು ಏನು ಅಭಿಪ್ರಾಯವನ್ನು ಕೊಟ್ಟಿದ್ದರೆಂದರೆ, ಅಲ್ಲಿ ಸ್ನಾತಕೋತ್ತರ ಶಿಕ್ಷಣ ಕೇಂದ್ರದ ಸ್ಥಾಪನೆಗೆ ಸಾಕಷ್ಟು ಅರ್ಹ ವಿದ್ಯಾರ್ಥಿಗಳು ಸಧ್ಯಕ್ಕೆ ದೊರೆಯುತ್ತಿಲ್ಲವೆಂದು ತಿಳಿಸಿದ ಮೇಲೆ ಹಾಗೂ ಅರ್ಹ ವಿದ್ಯಾರ್ಥಿಗಳು ಬರದಿದ್ದರೆ ಈ ಕೇಂದ್ರವನ್ನು ತೆರೆಯಲು ಕಾಲ ಸನ್ನಿಹಿತವಾಗಿಲ್ಲ ಎಂದು ಹೇಳಿ ಮತ್ತೊಂದು ಅಂಶವನ್ನು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಅಲ್ಲಿರುವ ಬಿ. ಫಾರ್ಮ ಕಾಲೇಜಿನಲ್ಲಿ ಎಂ. ಫಾರ್ಮ ಕಾಲೇಜ್ ತೆರೆಯುವ ವ್ಯವಸ್ಥೆ ಮಾಡಬಹುದು. ತುಂಗಭದ್ರಾ ಮಡಿಲಿನಲ್ಲಿರುವ ಜಿಲ್ಲೆಯಲ್ಲಿ ಗ್ರಾಮಾಭ್ಯುದಯ ಕಾರ್ಯಕ್ರಮ ಬಹಳ ಚೆನ್ನಾಗಿ ನಡೆಯುವುದರಿಂದ ಗ್ರಾಮಾಭ್ಯುದಯದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಅಥವಾ ಪದವಿ ಕಾಲೇಜನ್ನು ಸರ್ಕಾರದವರು ಅಥವಾ ಖಾಸಗಿಯವರು ತೆರೆಯಬಹುದೆಂದು ಒಂದು ಭಾಗದ ವರದಿಯಾದರೆ, ಎರಡನೇಯ ಭಾಗದ ವರದಿ ಏನೆಂದರೆ, ಸ್ನಾತಕೋತ್ತರ ಶಿಕ್ಷಣ ಕೇಂದ್ರದ ಆಗತ್ಯ ಇದೆ ಎಂದು ಒಪ್ಪಿಕೊಂಡರೆ 200 ಎಕರೆ ಜಾಗವನ್ನು ಜಿಲ್ಲಾಧಿಕಾರಿಗಳು ಸೂಚಿಸಿರಬೇಕು ಮತ್ತು ಅದನ್ನು ಗುರುತಿಸಬೇಕು ಮತ್ತು ಕ್ರಿಯಾಸಮಿತಿಯವರು ಏನು ಮಾಡಿದ್ದಾರೆಂದರೆ ಹತ್ತು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ ವಿಶ್ವವಿದ್ಯಾನಿಲಯಕ್ಕೆ ಪಾವತಿ ಮಾಡಬೇಕೆಂದು ಶಿಫಾರಸ್ಸು ಕೊಟ್ಟಿದ್ದಾರೆ. ನಮ್ಮ ಸರ್ಕಾರದ ವರದಿ ಪ್ರಕಾರ ಈ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾನಿಲಯ ಯಾವುದೇ ನಿರ್ದಿಷ್ಟ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಇಲ್ಲಿಯವರೆಗೆ ಕಳುಹಿಸಿಲ್ಲ, ಕ್ರಿಯಾಸಮಿತಿಯವರು ಏನು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ, ಬಾಕಿ ಕಾರ್ಯಕ್ರಮ ಏನು ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿದ್ದಾರೆ ಆ ಬಗ್ಗೆ ವರದಿ ಇಲ್ಲ, ಅದು ಇಲ್ಲದೆ ಒಮ್ಮೆಲೆ ಹೇಳಿಕೆಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ಸರಿಯಲ್ಲ, ಅಧ್ಯಯನ ಮಾಡಿ ವರದಿ ಕೊಟ್ಟಮೇಲೆ ಅದರ ಆಧಾರದ ಮೇಲೆ ಕಾರ್ಯಕ್ರಮ ಹಾಕಿಕೊಳ್ಳಬೇಕೆ ಹೊರತು ಅನ್ಯಥಾ ತೆಗೆಯುವುದಕ್ಕೆ ಕಷ್ಟವಾಗುತ್ತದೆ.

SRI QUAMARUL ISLAM : If these two conditions are fulfilled, with the Hon'ble Minister assure that a P.G. Centre will be established at Raichur?

SRI M. VEERAPPA MOILY : I cannot give assurance on nothing. I can give an assurance on the basis of certain things which are achieved. Let the report come...

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಇಂಜಿನಿಯರಿಂಗ್ ಮಹಾವಿದ್ಯಾಲಯಗಳ ಸಂಖ್ಯೆ

1483. ಶ್ರೀ ಡಾ|| ಎ.ಬಿ. ಮಲ್ಕಾರೆಡ್ಡಿ (ಯಾದಗಿರಿ) :- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

(ಅ) ಕರ್ನಾಟಕದಲ್ಲಿ ಇರುವ ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು ;

(ಆ) ಇಂಜಿನಿಯರಿಂಗ್ ಕಾಲೇಜುಗಳ ಹೆಸರುಗಳು ವಿದ್ಯಾರ್ಥಿಗಳು, ಉಪಾಧ್ಯಾಯರ ಸ್ಥೈತ ಅವರ ವಾರ್ಷಿಕ ಖರ್ಚೆಷ್ಟು;

(ಇ) ಕರ್ನಾಟಕದ ವಿದ್ಯಾರ್ಥಿಗಳು, ಹೊರ ರಾಜ್ಯದ ವಿದ್ಯಾರ್ಥಿಗಳು ಮತ್ತು ವಿದೇಶಿ ವಿದ್ಯಾರ್ಥಿಗಳು ಎಷ್ಟು ;

ಈ) ಹೊಸದಾಗಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ ;

ಉ) ಹಾಗಿದ್ದಲ್ಲಿ ವಿವರಗಳನ್ನು ಹಾಗೂ ಹೊಸ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಹಾಗೂ ವಿಶ್ವವಿದ್ಯಾನಿಲಯಗಳು ಈ ಬಗ್ಗೆ ನಿಗಧಿಪಡಿಸಿರುವ ಮಾರ್ಗ ಸೂಚಿಗಳ ವಿವರಗಳನ್ನು ನೀಡುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) –

ಅ) 51

ಆ) ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ಒದಗಿಸಲಾಗಿದೆ.

ಇ) ಕರ್ನಾಟಕದ ವಿದ್ಯಾರ್ಥಿಗಳು 9209
ಹೊರ ರಾಜ್ಯದ ವಿದ್ಯಾರ್ಥಿಗಳು5229
ವಿದೇಶಿ ವಿದ್ಯಾರ್ಥಿಗಳು5

ಈ) ಹೌದು

ಉ) 1991–92ನೇ ಸಾಲಿನಲ್ಲಿ5 ಪ್ರಸ್ತಾವನೆಗಳು
1992–93ನೇ ಸಾಲಿನಲ್ಲಿ6 ಪ್ರಸ್ತಾವನೆಗಳು ಬಂದಿರುತ್ತದೆ.
ಹೊಸ ಕಾಲೇಜುಗಳನ್ನು ಎ.ಐ.ಸಿ.ಟಿ.ಇ. ಯವರು ನಿಗದಿಪಡಿಸಿರುವ ಮಾರ್ಗ ಸೂಚಿಗಳನ್ವಯ ಪರಿಶೀಲಿಸಲಾಗುವುದು.
(Note three pages were not composed 80,81,& 82)

ಸವಣೂರಿನಲ್ಲಿ ಸರ್ಕೀರಿ ಮಹಾವಿದ್ಯಾಲಯ

1618. ಶ್ರೀ ಮಂಜುನಾಥ ಸಿ. ಕುನ್ನೂರು (ಶಿಂಗ್ಗಾವ್) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಸವಣೂರು ನಗರದಲ್ಲಿ ಸರ್ಕಾರಿ ಪದವಿ ಕಾಲೇಜು ಪ್ರಾರಂಭಿಸಿ ಎಷ್ಟು ವರ್ಷಗಳಾದವು?

ಆ) ಸದರಿ ಕಾಲೇಜು ಪ್ರಾರಂಭಿಸಲು ಸೂಕ್ತ ಕಟ್ಟಡದ ವ್ಯವಸ್ಥೆ ಮಾಡಲಾಗಿದೆಯೆ ;

ಇ) ಸವಣೂರು ನಗರದಲ್ಲಿರುವ ಕೋರ್ಟ್ ಆಫ್ ವಾರ್ಡ್ಸ್‌ಗೆ ಸಂಬಂಧಿಸಿದ 6 ಎಕರೆ ಭೂಮಿತಿಯನ್ನು ಭೂ ಸ್ವಾಧೀನ ಪಡಿಸಿಕೊಳ್ಳಲು ಈಗಾಗಲೇ ಮನವಿ ಸಲ್ಲಿಸಲಾಗಿದೆಯೆ;

ಈ) ಹಾಗಿದ್ದಲ್ಲಿ ಇನ್ನು ಎಷ್ಟು ದಿವಸಗಳಲ್ಲಿ ಈ ಕಾರ್ಯ ಪ್ರಾರಂಭಿಸಲಾಗುವುದು;

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) –

ಅ) 1984 – 85 ನೇ ಸಾಲಿನಲ್ಲಿ

ಆ) ಸವಣೂರು ಗ್ರಾಮದ ಕೋರ್ಟ್ ಆಫ್ ವಾರ್ಡ್ಸ್‌ನ ಸರ್ವೆ ನಂಬರ್ 48 ರಲ್ಲಿ 6 ಎಕರೆ 11 ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ. ಭೂ ಸ್ವಾಧೀನ ಪಡಿಸಿಕೊಂಡ ನಂತರ ಕಟ್ಟಡವನ್ನು ನಿರ್ಮಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಇ) ಮೇಲಿರುವಂತೆ

ಈ) ಭೂ ಸ್ವಾಧೀನ ಪಡಿಸಿಕೊಂಡ ನಂತರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.